ಓ.ಎಸ್. ನಂಬ್ರ: 214/2010

ಡಿ ಪಿ.ಡಬ್ಲ್ಯೂ: 1

ದಿನಾಂಕ: 1208-2016 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು: ಶ್ರೀ ವಕೀಲರಿಂದ

ಟಿ.ಆರ್.ವೆಂಕಟ್ರಮಣ ಹತ್ವಾರ್ ರವರು ಅಂದಾಜು 2009ರಲ್ಲಿ ತೀರಿ ಹೋಗಿರಬಹುದು. ಅವರು ದಿ: 19-7-2008ರಂದು ತೀರಿಹೋಗಿದ್ದಾರೆಂದರೆ ಇರಬಹುದು. ಜೀವಂತ ಇರುವಾಗ ನಿಪಿ:6ರ ಶರ್ತದ ಪ್ರಕಾರ ಕ್ರಯ ಪತ್ರವನ್ನು ಬರೆದುಕೊಡಿ ಎಂದು ಕೇಳಿಕೊಂಡು ಅವರಿಗೆ ನೋಟೀಸನ್ನು ನೀಡಿರುವುದಿಲ್ಲ. ನಿಪಿ:6ರಲ್ಲಿ ದಾವಾ ಜಮೀನಿನ ಚತುರ್ಗಡಿಗಳನ್ನು ಕಾಣಿಸಿರಬಹುದು. ಜಮೀನುಗಳಿಗೆ ಸಂಬಂಧಪಟ್ಟಂತೆ ಕ್ರಯ ದಸ್ತಾವೇಜು ಮಾಡಿಸುವಂತಹ ಕೆಲಸ ಮತ್ತು ಅದನ್ನು ನೋಂದಾಯಿಸುವಂತಹ ಕೆಲಸದ ಬಗ್ಗೆ ನನಗೆ ಅನುಭವ ಇದೆ. ನಾನು ಖಾಯಂ ಆಗಿ ಒಬ್ಬರಲ್ಲಿ ಮಾತ್ರ ದಸ್ತಾವೇಜು ಬರೆಸಲು ಹೋಗುವುದಿಲ್ಲ. ನಾನು ಒಂದೊಂದು ಸಲ ಒಬ್ಬೊಬ್ಬರತ್ರ ಹೋಗುತ್ತೇನೆ. ಸುಧಾಕರ ಹೆಗ್ಡೆ, ಕೆ.ಪಿ.ವೆಂಕಟ್ರಮಣ ಮತ್ತು ಇತರ ದಸ್ತಾವೇಜು ಬರಹಗಾರರ ಬಳಿ ನಾನು ಹೋಗಿರುತ್ತೇನೆ. ನಿಪಿ:7 ನೋಟೀಸಿನಲ್ಲಿ ದಾವೆಗೆ ಸಂಬಂಧಪಟ್ಟ ಜಮೀನಿನ ಚತುರ್ಗಡಿ ತೋರಿಸಿರುವುದಿಲ್ಲ. ನಾನು ಕ್ರಯಪತ್ರದ ಪ್ರಕಾರ ಖರೀದಿ ಮಾಡಿದ ಜಮೀನುಗಳ ಸ.ನಂ.37ಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಈ ದಾವೆಗೆ ಸಂಬಂಧಪಟ್ಟ ಸ.ನಂ. 48 ಕ್ಕೆ ಸಂಬಂಧಪಟ್ಟ ಆಸ್ತಿಗಳು ಆಗಿರುತ್ತವೆ. ಈ ದಾವೆಯನ್ನು ನಾನು 38 ಮತ್ತು 20 ಸೆಂಟ್ಸು ಜಮೀನಿಗೆ ಸಂಬಂದಪಟ್ಟಂತೆ ಸಬ್‌ಡಿವಿಜನ್ ಆದ ಜಮೀನುಗಳಿಗೆ ಹಾಕಿರುತ್ತೇನೆ. ನಿಪಿ:6 ಕರಾರು ಪತ್ರದಲ್ಲಿ ಸ.ನಂ. 48-8 ಮತ್ತು 48-7ಬಿ ಎಂದು ತೋರಿಸಿದ್ದು ಆರ್‌ಟಿಸಿಯಲ್ಲಿ 48-7ಬಿ ಹಾಗೇ ಇದ್ದು 48-8 ಇದ್ದದ್ದು 48-8ಪಿ1 ಎಂದು ಆಗಿರಬಹುದು. ಪ್ರತಿವಾದಿಯರ ತಂದೆ ತಾಯಿ ಆ ಸ.ನಂಬ್ರದಲ್ಲಿ ಒಂದು ಅಂಶವನ್ನು ಬೇರೆಯವರಿಗೆ ಮಾರಾಟ ಮಾಡಿದ ಕಾರಣ ಆ ರೀತಿ ಆಗಿರುತ್ತದೆ. ಸ.ನಂ 48-8ರಲ್ಲಿ ಮೂಲತಃ 52 ಸೆಂಟ್ಸು ಜಮೀನು ಇತ್ತು. ಆ ಪೈಕಿ 14 ಸೆಂಟ್ಸು ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕುವ ಮೊದಲೇ ಆ ಜಮೀನನ್ನು ಮಾರಾಟ ಮಾಡಿ ಆಗಿತ್ತು. ಆ 14 ಸೆಂಟ್ಸು ಜಮೀನು ದಾವಾ ಐಟಂ ನಂಬ್ರ 1 ಜಮೀನಿನ ಮಧ್ಯ ಭಾಗದಲ್ಲಿದೆ. ಆ 14 ಸೆಂಟ್ಸು ಜಮೀನು ಸ.ನಂ 48-8ಪಿ ಸರಣಿಯಲ್ಲಿ ಬರುತ್ತದೆ. ಅವರು ಮಾರಾಟ ಮಾಡಿದ 14 ಸೆಂಟ್ಸಿನ ಪೂರ್ವದಲ್ಲಿ ದಾವಾ ಐಟಂ ನಂಬ್ರ 1ಕ್ಕೆ ಸೇರಿದ 22 ಸೆಂಟ್ಸು ಜಮೀನು ಇದೆ. ಪಶ್ಚಿಮಕ್ಕೆ ಈ ದಾವೆಯ ಐಟಂ ನಂಬ್ರ 1ರ ಅಂದಾಜು ಸುಮಾರು 16 ಸೆಂಟ್ಸು ಜಮೀನು ಇದೆ. ಉತ್ತರಕ್ಕೆ ಅದೇ ಸ.ನಂಬರಿನ 17 ಸೆಂಟ್ಸು ಇದ್ದು ಅದನ್ನು ಕೂಡಾ

ನಾನು ಕೇಳುತಿದ್ದೇನೆ. ದಕ್ಷಿಣಕ್ಕೆ ಬೇರೆಯವರ ಅಂದರೆ ಮಿಣ್ಣು ಪೂಜಾರ್ತಿ ಎಂಬವರ ಜಾಗ ಇದೆ. ನಿಪಿ:6 ಕರಾರು ಪತ್ರ ಮಾಡಿಕೊಳ್ಳುವಾಗ ದಾವಾ ಜಮೀನುಗಳ ಚತುರ್ಗಡಿಗಳು ನನಗೆ ಗೊತ್ತಿತ್ತು. ಕರಾರು ಪತ್ರದಲ್ಲಿ ಚತುರ್ಗಡಿಗಳನ್ನು ಬರೆಸಲು ತೊಂದರೆ ಇರಲಿಲ್ಲ. ನಿಪಿ:7 ನೋಟೀಸಿನಲ್ಲಿ ಕೂಡಾ ಚತುರ್ಗಡಿಗಳನ್ನು ತೋರಿಸಲು ತೊಂದರೆ ಇರಲಿಲ್ಲ. ನಾನು ದಾವೆ ಹಾಕುವಾಗ ಕೂಡಾ ಅದೇ ಚತುರ್ಗಡಿಗಳನ್ನು ಹೇಳಬೇಕಾಗಿತ್ತು ಎಂದರೆ ಸರಿ. ನನ್ನ ಕೈಫೇತಿನ ಶೆಡ್ಯೂಲಿನಲ್ಲಿ ನಾನು ಮೇಲೆ ಹೇಳಿದಂತೆ ಹೋಲುವ ಹಾಗೆ ಚತುರ್ಗಡಿಗಳನ್ನು ಹೇಳಿರುತ್ತೇನೆ. ದಾವಾ ಆಸ್ತಿಯ ಐಟಂ ನಂಬ್ರ 1ರ ಯಾವುದೇ ಚತುರ್ಗಡಿಯಲ್ಲಿ ಗಡಿಗಳನ್ನು ತೋರಿಸುವಾಗ ಯಾವ ಬದಿಯಲ್ಲಿ ಕೂಡಾ ಸ.ನಂ. 48-8 ಇರುವುದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಪೂರ್ವ ಮತ್ತು ದಕ್ಷಿಣ ಬದಿಗೆ ಸ.ನಂ 48-8ರಲ್ಲಿ ಜಮೀನು ಇದೆ ಎಂದು ಹೇಳಿದ್ದೇನೆ. ನನಗೆ ಈ ದಾವೆಯಲ್ಲಿ ಕೇಳಿದಷ್ಟು ವಿಸ್ತೀರ್ಣದ ಜಮೀನು ಅಲ್ಲದೆ ಸ.ನಂ48-8ರಲ್ಲಿ ಬೇರೆ ಆಸ್ತಿ ಇಲ್ಲ. ನನ್ನ ಕೈಫೇತಿನ ಶೆಡ್ಯೂಲಿನಲ್ಲಿ ಪೂರ್ವ ಬದಿಗೆ ನನ್ನದೇ ಜಮೀನು ಎಂದು ತೋರಿಸಿದ್ದು ಅದರ ಸ.ನಂ 48-9 ಆಗಿರುತ್ತದೆ. ನಾನು ಈ ದಾವೆಯಲ್ಲಿ ಸುಳ್ಳುಸಾಧನೆ ಮಾಡುತ್ತಿರುವ ಕಾರಣ ದಾವಾ ಎ ಶೆಡ್ಯೂಲಿನ ಚತುರ್ಗಡಿ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬ್ರ 2ರಲ್ಲಿ ಒಟ್ಟು 20 ಸೆಂಟ್ಸು ಮಾತ್ರ ಇರುವಂತಾದ್ದು. ಸ.ನಂ.48-7ರಲ್ಲಿ ಮೂಲತಃ ಒಟ್ಟು ವಿಸ್ತೀರ್ಣ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಬಗ್ಗೆ ಯಾವುದೇ ಕ್ರಯದ ಪ್ರತಿಫಲವನ್ನು ಇವತ್ತಿನವರೆಗೆ 1 ರೂಪಾ ಕೂಡಾ ಪ್ರತಿವಾದಿ 1 ಮತ್ತು 2ರವರಿಗೆ ಅಥವಾ ಅವರ ತಂದೆ ವೆಂಕಟ್ರಮಣ ಹತ್ವಾರ್ ರವರಿಗೆ ನಾನು ಕೊಟ್ಟದ್ದೇ ಇಲ್ಲ. ವಿವಾದಿತ ನಿಪಿ:6 ಕರಾರಿನಲ್ಲಿ ತೋರಿಸಿದ ಐದೂ ಐಟಂ ಜಮೀನುಗಳ ಪೈಕಿ ಆ 3 ಐಟಂ ಜಮೀನುಗಳನ್ನು ನಾನು ನಿಪಿ:11ರ ಪ್ರಕಾರ ಕ್ರಯ ಪತ್ರ ಬರೆಸಿಕೊಂಡಿದ್ದೇನೆ. ಆ ಮೂರು ಐಟಂ ಜಮೀನುಗಳಿಗೆ ಸಂಬಂಧಪಟ್ಟಂತೆ ನಾನು 85 ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತೇನೆ. ನಾನು ನಿಪಿ:11 ಕ್ರಯಪತ್ರವನ್ನು ಕೂಡಾ ನಿಪಿ:6 ಕರಾರು ಪತ್ರದ ಆಧಾರದ ಮೇಲೆ ಬರೆಸಿಕೊಂಡಿದ್ದೇನೆ. ಮೇಲೆ ಹೇಳಿದ 85 ಸಾವಿರ ರೂಪಾಯಿಗಳನ್ನು ಹೊರತುಪಡಿಸಿ ನಾನು ಪ್ರತಿವಾದಿಯರಿಗಾಗಲೀ, ಅವರ ತಂದೆಗಾಗಲೀ 1 ರೂಪಾಯಿಯನ್ನೂ ಕೊಟ್ಟಿರುವುದಿಲ್ಲ.

ನಾನು ನಿಪಿ:6 ಕರಾರು ಪತ್ರವನ್ನು ನಾನು ದಸ್ತಾವೇಜು ಬರಹಗಾರರಾದ ಕೆ.ಜಿ.ವೆಂಕಟ್ರಮಣರವರಲ್ಲಿ, ನಿಪಿ:11 ಕ್ರಯ ಪತ್ರವನ್ನು ದಸ್ತಾವೇಜು ಬರಹಗಾರರಾದ ಎನ್.ಸುಧಾಕರ ಶೆಟ್ಟಿಯವರಲ್ಲಿ ಬರೆಸಿರುತ್ತೇನೆ. ನಾನು ನಿಪಿ:11 ಕ್ರಯ ಪತ್ರ ಮಾಡಿಸುವಾಗ ಎನ್.ಸುಧಾಕರ ಶೆಟ್ಟಿಯವರಲ್ಲಿ ಹೋದಾಗ ನಿಪಿ:6 ಕರಾರು ಪತ್ರವನ್ನು ಅವರಿಗೆ ತೋರಿಸಿರುವುದಿಲ್ಲ. ಕ್ರಯ ಪತ್ರದಲ್ಲಿ ಅದರ ಪ್ರತಿಫಲವನ್ನು ಯಾವಾಗ ಮತ್ತು ಯಾವ ರೀತಿಯಲ್ಲಿ ಕೊಟ್ಟದ್ದು ಎಂದು ಬರೆಯುವ ಅವಶ್ಯಕತೆ ಇದೆ ಎಂದರೆ ಸರಿ . ನಾನು ನಿಪಿ:6 ಕರಾರು ಪತ್ರ ಆಗುವ

ಸಮಯದಲ್ಲಿ 10 ಸಾವಿರ ರೂಪಾಯನ್ನು ಕೊಟ್ಟಿರುತ್ತೇನೆ. ಉಳಿದ ಹಣವನ್ನು ನಾನು ನಿಪಿ:11 ಕ್ರಯ ಪತ್ರ ಆಗುವಾಗ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಕೊಟ್ಟಿರುತ್ತೇನೆ. ಆ ದಿನ ನಾನು 75 ಸಾವಿರ ರೂಪಾಗಳನ್ನು ಕೊಟ್ಟಿರುತ್ತೇನೆ. ಮೇಲೆ ಹೇಳಿದ ರೂಪದಲ್ಲಿ ಹಣವನ್ನು ಪಡೆದ ಬಗ್ಗೆ ನಿಪಿ:11ರಲ್ಲಿ ತೋರಿಸಿರುವುದಿಲ್ಲ. ಮೇಲೆ ಹೇಳಿದ 75 ಸಾವಿರ ರೂಪಾಗಳನ್ನು ಕೊಟ್ಟ ಬಗ್ಗೆ ಪ್ರತ್ಯೇಕ ದಾಖಲೆಗಳನ್ನು ಮಾಡಿಸಿಲ್ಲ.

(ಸಾಕ್ಷಿಯ ಆರೋಗ್ಯ ಹದಗೆಟ್ಟ ಕಾರಣ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)

ಓ.ಹೇ.ಕೇ.ಸರಿ ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಕುಂದಾಪುರ